ಕರ್ನಾಟಕ ಸರ್ಕಾರ

ಸಂ: ದೇಸಂಸಂ/ಸಿಆರ್–3/ಎಂಪಿಕ್/2020–21

ನಿರ್ದೇಶಕರ ಕಛೇರಿ,
ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ,
ದೇವರಾಜ ಅರಸು ಭವನ, ವಸಂತನಗರ,
ಬೆಂಗಳೂರು–52, ದಿನಾಂಕ: 12–11–2020.

**ಸರ್ಕಾರದ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು,**
**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,**
**ಬೆಂಗಳೂರು.**

13/11/2020

**ಮಾನ್ಯರೆ,**

ವಿಷಯ:– 2020–21 ನೇ ಸಾಲಿನ ಅಕ್ಟೋಬರ್ 2020 ತಿಂಗಳಿನ ಅಂತ್ಯದವರೆಗಿನ ಎಂಪಿಕ್ ಪ್ರಗತಿಯ ಪರಿಶೀಲನಾ ಸಭೆ ಕುರಿತು.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಹಿಂವಕ 02 ಸಮನ್ವಯ 2020 ದಿನಾಂಕ: 11.11.2020.

******

ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯಡಿ ಹಿಂದುಳಿದ ವರ್ಗಗಳ/ಅಲೆಮಾರಿ–ಅರೆ ಅಲೆಮಾರಿ ಜನಾಂಗಗಳ ಅಧ್ಯಯನ ಈ ವರ್ಗಗಳಿಗಾಗಿ ಕೈಗೊಂಡಿರುವ ಯೋಜನೆಗಳ ಬಗ್ಗೆ ವಿಚಾರ ಸಂಕಿರಣ, ವಿಚಾರಗೋಷ್ಠಿ, ತರಬೇತಿ ಕಾರ್ಯಗಾರ, ಸಾಕ್ಷ್ಯಚಿತ್ರ ನಿರ್ಮಾಣ, ಕುಲಶಾಸ್ತ್ರೀಯ ಅಧ್ಯಯನ ಇತ್ಯಾದಿ ಕಾರ್ಯಕ್ರಮಗಳು ಹಿಂದುಳಿದ ವರ್ಗಗಳ ಜನಾಂಗದವರ ಆರೋಗ್ಯ, ಜಾಗೃತಿ ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಉದ್ದೇಶಕ್ಕಾಗಿ 2020–21 ನೇ ಸಾಲಿನಲ್ಲಿ ಆಯವ್ಯಯವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ಒದಗಿಸುತ್ತಿರುವುದು ಸರಿಯಷ್ಟೆ. ಸದರಿ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಗಳಿಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸದ್ಬಳಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಾರಣವೇನೆಂದರೆ ಯಾವುದೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕಾದಲ್ಲಿ ಹಿಂದುಳಿದ ವರ್ಗಗಳ ಸಮುದಾಯದವರನ್ನು ಭೇಟಿ ಮಾಡಲು ಮತ್ತು ಇವುಗಳಿಗೆ ಸಂಬಂಧಿಸಿದಂತೆ ಸಭೆಗಳನ್ನು ನಡೆಸಲು ಕೋವಿಡ್–19ರ ಪರಿಣಾಮದಿಂದಾಗಿ ಮತ್ತು ಈ ಸಂಬಂಧದ ನಿಯಂತ್ರಣ ಮಾಡುವ ಹಿನ್ನೆಲೆಯಲ್ಲಿ ಸರ್ಕಾರದ ನಿರ್ಬಂದಗಳ ಆದೇಶಗಳನ್ನು ಸಹ ಪರಿಪಾಲಿಸಬೇಕಾಗಿರುತ್ತದೆ. ಈ ದೃಷ್ಟಿಯಿಂದಾಗಿ ಪ್ರಸಕ್ತ ಆರ್ಥಿಕ ವರ್ಷಾಂತ್ಯದವರೆವಿಗೂ ಸಂಸ್ಥೆಯ ವತಿಯಿಂದ ಈ ಸಂಬಂಧದ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗುವುದಿಲ್ಲ. ಅಂತೆಯೇ ಈ ಕುರಿತು ವಾಸ್ತವ ಅಂಶಗಳನ್ನು ವಿವರಿಸುತ್ತಾ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರಿಗೆ 2020–21ನೇ ಸಾಲಿನಲ್ಲಿ ಸಂಸ್ಥೆಯ

ಲೆಕ್ಕಶೀರ್ಷಿಕೆ: 2225-03-277-2-08 ರಲ್ಲಿ ಬಿಡುಗಡೆಯಾಗುವ ಅನುದಾನವನ್ನು ಬಿಡುಗಡೆ ಮಾಡದೇ ಇರಲು ಪತ್ರ ಮೂಲಕ ಕೋರಲಾಗಿದೆ. ಆದುದರಿಂದ ಪ್ರಸಕ್ತ ಆರ್ಥಿಕ ವರ್ಷಾಂತ್ಯದವರೆವಿಗೂ ಸಮುದಾಯ ಕಾರ್ಯಕ್ರಮಗಳಾಗಿರುವುದರಿಂದ ಕೋವಿಡ್-19ರ ಪರಿಣಾಮದ ಹಿನ್ನೆಲೆಯಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗದ ಅಂಶವನ್ನು ಈ ಮೂಲಕ ಸಲ್ಲಿಸಲಾಗಿದೆ.

ಆದಾಗ್ಯೂ ಮೇಲಿನ ಸಮುದಾಯ ಕಾರ್ಯಕ್ರಮಗಳನ್ನು ಹೊರತುಪಡಿಸಿದಂತೆ ಸಂಸ್ಥೆಯ ವತಿಯಿಂದ ಅಲೆಮಾರಿ-ಅರೆ ಅಲೆಮಾರಿ ಕೋಶ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಸಹಯೋಗ ಹಾಗೂ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಇವರ ಸಹಕಾರದೊಂದಿಗೆ ಅತೀ ಹಿಂದುಳಿದ 20 ಅಲೆಮಾರಿ/ಅರೆ ಅಲೆಮಾರಿ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ಮತ್ತು ಇತರ ಕಾರ್ಯಕ್ರಮಗಳನ್ನು ಎಂದಿನಂತೆ ಸಂಸ್ಥೆಯ ಮೂಲಕ ನಿರ್ವಹಣೆ ಮಾಡಲಾಗುತ್ತಿರುವ ವರದಿಯನ್ನು ಈ ಮೂಲಕ ತಮಗೆ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ,
ಬೆಂಗಳೂರು.